08/09/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಯಾವುದೇ ತಪ್ಪಾದರೆ ತಂದೆಯೊಂದಿಗೆ ಮುಚ್ಚಿಡಬೇಡಿ, ಒಂದುವೇಳೆ ಮುಚ್ಚಿಟ್ಟರೆ ಮುಚ್ಚಿಡುತ್ತಾ-ಮ್ಮುಚ್ಚಿಡುತ್ತಾ ತಾವೂ ಮುಚ್ಚಿಹೋಗುತ್ತೀರಿ (ಮರೆಯಾಗುವಿರಿ)"

ಪ್ರಶ್ನೆ: ಹಾಳಾಗಿರುವುವದನ್ನು ಸರಿಪಡಿಸುವ ತಂದೆಯು ತಾವು ಮಕ್ಕಳ ತಪ್ಪನ್ನು ಯಾವ ಆಧಾರದ ಮೇಲೆ ಸರಿಪಡಿಸುತ್ತಾರೆ?

ಉತ್ತರ: ಪವಿತ್ರತೆಯ ಆಧಾರದ ಮೇಲೆ ಯಾವಾಗ ತಂದೆಯು ಹಾಳಾಗಿರುವವರನ್ನು ಸುಧಾರಿಸಲು ಬರುತ್ತಾರೆಯೋ ಆಗ ಈ ಪವಿತ್ರತೆಯ ಮೇಲೆಯೇ ಅನೇಕ ಜಗಳಗಳಾಗುತ್ತವೆ. ಅಬಲೆಯರಿಗೆ ದುಃಖ ಸಹನೆ ಮಾಡಬೇಕಾಗುತ್ತದೆ ಎಂಬುದು ನಿಮಗೆ ಗೊತ್ತಿದೆ. ಪವಿತ್ರರಾಗದ ವಿನಃ ದೇವತೆಗಳಾಗಲು ಸಾಧ್ಯವಿಲ್ಲ. ಭಾರತವನ್ನು ಕವಡೆಯಿಂದ ವಜ್ರಸಮಾನ, ದುಃಖಧಾಮದಿಂದ ಸುಖಧಾಮ, ಹಳೆಯದನ್ನು ಹೊಸದನ್ನಾಗಿ ಮಾಡಲು ಅವಶ್ಯವಾಗಿ ಪವಿತ್ರರಾಗಬೇಕಾಗುತ್ತದೆ. ತಾವು ಮಕ್ಕಳು ಇದೇ ಮಾತಿನ ಸಹಯೋಗವನ್ನು (ಪವಿತ್ರತೆಯ) ತಂದೆಗೆ ಕೊಡುತ್ತೀರಿ ಆದ್ದರಿಂದ ತಂದೆಯ ಜೊತೆ-ಜೊತೆಗೆ ನಿಮ್ಮ ಪೂಜೆಯೂ ಆಗುತ್ತದೆ.

ಗೀತೆ: ಭೋಲಾನಾಥನಿಗಿಂತ ಭಿನ್ನ............

ಓಂ ಶಾಂತಿ. ಮಕ್ಕಳು ಗೀತೆಯನ್ನು ಕೇಳಿದಿರಾ? ಯಾವ ಮಕ್ಕಳು? ಪ್ರಜಾಪಿತ ಬ್ರಹ್ಮಾಕುಮಾರ ಮತ್ತು ಕುಮಾರಿಯರು. ತಂದೆಯು ತಿಳಿಸುತ್ತಾರೆ - ನಾನು ಬ್ರಹ್ಮಾಕುಮಾರ-ಕುಮಾರಿಯರ ಸಮ್ಮುಖದಲ್ಲಿಯೇ ಜ್ಞಾನವನ್ನು ತಿಳಿಸುತ್ತೇನೆ. ಮಕ್ಕಳಿಗೂ ಗೊತ್ತಿದೆ ಯಾವುದೇ ಶೂದ್ರ ಕುಮಾರರು ಅಥವಾ ರಾವಣ ಕುಮಾರರು ಇಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಹೆಸರೇ ಆಗಿದೆ ಬ್ರಹ್ಮಾಕುಮಾರ-ಕುಮಾರಿಯರು ಅರ್ಥಾತ್ ಪ್ರಜಾಪಿತ ಬ್ರಹ್ಮನ ಸಂತಾನರು. ನಿಮಗೂ ಸಹ ಗೊತ್ತಿದೆ - ನಮ್ಮ ಬ್ರಹ್ಮಾಬಾಬಾರವರ ತಂದೆ ಶಿವಬಾಬಾ ಆಗಿದ್ದಾರೆ. ನಾವಾತ್ಮಗಳ ತಂದೆಯು ಶಿವನಾಗಿದ್ದಾರೆ. ಆ ತಂದೆಯೇ ಹಾಳಾಗುವುದನ್ನು ಸರಿಪಡಿಸುವವರಾಗಿದ್ದಾರೆ. ಭಾರತವೇ ಹಾಳಾಗಿದೆ, ಅದನ್ನೇ ಸರಿಪಡಿಸುತ್ತಾರೆ. ತಂದೆಯು ತಿಳಿಸುತ್ತಾರೆ - ಭಾರತವು ವಜ್ರಸಾಮನವಾಗಿತ್ತು, ಸುಖಧಾಮವಾಗಿತ್ತು. ಹೊಸಪ್ರಪಂಚದಲ್ಲಿ ಹೊಸ ಭಾರತ, ಹೊಸ ದೇವೀ-ದೇವತೆಗಳ ರಾಜ್ಯವಿತ್ತು. ಈಗ ಭಾರತವು ಹಾಳಾಗಿದೆ. ಅಸುರರ ರಾಜ್ಯವಾಗಿದೆ, ಹಾಳಾಗಿರುವುದನ್ನು ಸರಿಪಡಿಸುವವರು ಅಥವಾ ಸುಧಾರಣೆ ಮಾಡುವವರು ಯಾರು? ಇದು ತಾವು ಬ್ರಾಹ್ಮಣರ ವಿನಃ ಮತ್ಯಾರೂ ಅರಿತುಕೊಳ್ಳಲು ಸಾಧ್ಯವಿಲ್ಲ. ಭಾರತವು ಅವಶ್ಯವಾಗಿ ಬಹಳ ಶ್ರೇಷ್ಠವಾಗಿತ್ತು. ಈಗ ಕನಿಷ್ಠವಾಗಿದೆ. ಅನ್ಯ ಯಾವುದೇ ಧರ್ಮಕ್ಕೋಸ್ಕರ ಅವರು ಬಹಳ ಶ್ರೇಷ್ಠವಾಗಿದ್ದವರು ಈಗ ಕನಿಷ್ಟರಾದರು ಎಂದು ಹೇಳುವುದಿಲ್ಲ. ಯಾರು ರಾಜ್ಯವನ್ನು ಕಳೆದುಕೊಂಡಿದ್ದಾರೆಯೋ ಅವರೇ ಪುನಃ ರಾಜ್ಯಭಾರ ಮಾಡುತ್ತಾರೆ. ಆದ್ದರಿಂದಲೇ ತಂದೆಯನ್ನು ಪುನಃ ಹಾಳಾಗಿರುವುದನ್ನು ಸುಧಾರಣೆ ಮಾಡುವವರೆಂದು ಹೇಳುತ್ತಾರೆ. ಸತ್ಯಯುಗದ ನಂತರ ಮತ್ತೆ ಅವಶ್ಯವಾಗಿ ತ್ರೇತಾ, ದ್ವಾಪರ, ಕಲಿಯುಗ ಬರಲೇಬೇಕಾಗಿದೆ. ಈಗ ಎಲ್ಲರೂ ಕನಿಷ್ಠರಾಗಿದ್ದಾರೆ ಅರ್ಥಾತ್ ಹಾಳಾಗಿದ್ದಾರೆ. ಎಲ್ಲಾ ಧರ್ಮಗಳ ನಡುವೆ ಬಹಳ ಏರುಪೇರುಗಳಿವೆ. ಚೀನಿಯರ ನಡುವೆ, ಬೌದ್ಧಿಯರ ನಡುವೆ ಎಲ್ಲರೂ ಪರಸ್ಪರ ಎಷ್ಟೊಂದು ಜಗಳ-ಕಲಹ ಮಾಡಿಕೊಳ್ಳುತ್ತಾರೆ. ಯಾವ ಇಷ್ಟೆಲ್ಲಾ ಅನೇಕ ಧರ್ಮಗಳಿವೆ, ಎಲ್ಲವೂ ಕನಿಷ್ಠವಾಗಿದೆ. ಎಲ್ಲರೂ ತಮೋಪ್ರಧಾನ ಜಡಜಡೀಭೂತ ಸ್ಥಿತಿಯಲ್ಲಿ ಇದ್ದಾರೆ. ಎಲ್ಲರೂ ಸತೋಪ್ರಧಾನದಿಂದ ತಮೋಪ್ರಧಾನವಾಗಲೇಬೇಕಾಗಿದೆ. ರಾವಣನು ಬಂದು ಎಲ್ಲರನ್ನು ತಮೋಪ್ರಧಾನ ಮಾಡಿಬಿಡುತ್ತಾನೆ ನಂತರ ರಾಮನು ಬಂದು ರಾವಣ ಕೆಡಿಸಿರುವುದನ್ನು ಸುಧಾರಣೆ ಮಾಡುತ್ತಾರೆ.

ರಾಮನೆಂದು ಯಾರಿಗೆ ಹೇಳಲಾಗುತ್ತದೆ ಎಂದು ನಿಮಗೆ ತಿಳಿದಿದೆ. ರಾಮ-ರಾಮ ಎಂದು ಹೇಳಿ ಮಾಲೆಯನ್ನು ಜಪಿಸುತ್ತಾರೆ. ಅಂದಾಗ ಪರಮಾತ್ಮನನ್ನು ನೆನಪು ಮಾಡುತ್ತಾರೆ. ಅದರ ಹೆಸರೇ ರುದ್ರ ಮಾಲೆಯಾಗಿದೆ. ರುದ್ರ ಶಿವನ ಕೊರಳಿನ ಮಾಲೆಯಾಗಿದೆ. ಎಲ್ಲಾ ಧರ್ಮದವರು ಅವಶ್ಯವಾಗಿ ನೆನಪು ಮಾಡುತ್ತಾರೆ ಏಕೆಂದರೆ ಎಲ್ಲಾ ಧರ್ಮದವರ ಸದ್ಗತಿದಾತ ಶಿವನಾಗಿದ್ದಾರೆ. ಜೊತೆಯಲ್ಲಿ ಅವಶ್ಯವಾಗಿ ಸಹಯೋಗಿಗಳು ಇರುವರು. ರುದ್ರಮಾಲೆಯೂ ಬಹಳ ಸೇವೆ ಮಾಡುತ್ತದೆ. ತಾವು ಮಕ್ಕಳು ಬಹಳ ಸೇವೆ ಮಾಡಬೇಕಾಗುತ್ತದೆ. ಸೇವೆ ಮಾಡುವ ಕಾರಣವೇ ನಿಮ್ಮ ಪೂಜೆ ಆಗುತ್ತದೆ. ಕೇವಲ ಭಾರತದಲ್ಲಷ್ಟೇ ಅಲ್ಲ ಇಡೀ ಪ್ರಪಂಚದಲ್ಲಿ ಏಕೆಂದರೆ ನೀವು ಇಡೀ ಪ್ರಪಂಚವನ್ನೇ ಪಾವನ ಮಾಡುತ್ತೀರಿ. ಸರ್ವಶಕ್ತಿವಂತ ತಂದೆಯಿಂದ ಶಕ್ತಿಯನ್ನು ಪಡೆದುಕೊಂಡು ನೀವು ಸ್ವರ್ಗವನ್ನಾಗಿ ಮಾಡುತ್ತೀರಿ, ಆದ್ದರಿಂದ ಅವಶ್ಯವಾಗಿ ನೀವು ಮಕ್ಕಳನ್ನು ಇಡೀ ಸೃಷ್ಟಿಯು ಪೂಜಿಸಬೇಕು. ರುದ್ರ ತಂದೆಯಾಗಿದ್ದಾರೆ ಅವರ ದೊಡ್ಡ ಶಿವಲಿಂಗವನ್ನು ಮಣ್ಣಿನಿಂದ ತಯಾರಿಸುತ್ತಾರೆ ಹಾಗೂ ಚಿಕ್ಕ-ಚಿಕ್ಕ ಸಾಲಿಗ್ರಾಮಗಳನ್ನು ಮಾಡುತ್ತಾರೆ. ಹೆಸರು ರುದ್ರ ಯಜ್ಞವಾಗಿದೆ. ನಿಮ್ಮ ಪೂಜೆ ಆಗುತ್ತದೆ ಏಕೆಂದರೆ ನೀವು ಸೇವೆ ಮಾಡಿ ಹೋಗಿದ್ದೀರಿ. ರುದ್ರ ಯಜ್ಞವನ್ನು ರಚಿಸುತ್ತಾರೆ ಮತ್ತು ಬಹಳ ಪೂಜೆ ಮಾಡುತ್ತಾರೆ. ಲಕ್ಷಾಂತರ ಸಾಲಿಗ್ರಾಮಗಳನ್ನು ಮಾಡುತ್ತಾರೆ. ಮೊದಲು 8ರ ಮಾಲೆ ಇದೆ ನಂತರ 108ರ ಮಾಲೆ ಮತ್ತು 16108ರ ಮಾಲೆಯಾಗಿದೆ. ಇವರು ಸಹಾಯ ಮಾಡಿದ್ದಾರೆ. ಯಾರು ಬಹಳ

ಸಹಯೋಗ ಕೊಡುತ್ತಾರೆ ಅವರೇ ಸಮೀಪದಲ್ಲಿ ಇರುತ್ತಾರೆ.

ಈಗ ನೀವು ರುದ್ರಮಾಲೆಯಲ್ಲಿ ಸಮೀಪ ಪೋಣಿಸಲ್ಪಡುವುದಕ್ಕೋಸ್ಕರ ಪುರುಷಾರ್ಥ ಮಾಡುತ್ತಿದ್ದೀರಿ. ಕೇವಲ ತಂದೆಯನ್ನು ನೆನಪು ಮಾಡಬೇಕಾಗಿದೆ, ಇದು ಬಹಳ ಸಹಜವಾಗಿದೆ. ತಂದೆಯನ್ನು ನೆನಪು ಮಾಡುವುದು ಮಕ್ಕಳಿಗೆ ಬಹಳ ಸಹಜವಾಗಿದೆ ಏಕೆಂದರೆ ಜನ್ಮತಃ ಮಕ್ಕಳು ತಂದೆ-ತಾಯಿ ಎಂದು ಹೇಳುವುದನ್ನು ಕಲಿತುಬಿಡುತ್ತಾರೆ. ಅಂದಾಗ ನೀವೂ ಸಹ ಮಮ್ಮಾ-ಬಾಬಾರವರ ಮಕ್ಕಳಾಗಿದ್ದೀರಿ, ನೀವೇ ಮಾತಾ-ಪಿತ ಎಂದೂ ಸಹ ಹೇಳುತ್ತೀರಿ. ನಾವೀಗ ಮಾತಾ-ಪಿತರ ಸಮ್ಮುಖದಲ್ಲಿ ಕುಳಿತಿದ್ದೇವೆ. ಅವರು ನಮಗೆ ರಾಜ್ಯಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳಲು ಶಿಕ್ಷಣ ಕೊಡುತ್ತಾರೆ ಎಂಬುದನ್ನು ತಿಳಿದುಕೊಂಡಿದ್ದೀರಿ. ರಾಜರನ್ನಾಗಿ ಮಾಡುವ ಶಿಕ್ಷಣವನ್ನು ರಾಜರೇ ಕೊಡಬೇಕು. ಹೇಗೆ ಬ್ಯಾರಿಸ್ಟರ್ನ್ನಾಗಿ ಮಾಡಲು ಬ್ಯಾರಿಸ್ಟರ್ ಶಿಕ್ಷಣ ಕೊಡುತ್ತಾರೆ ಆದರೆ ಇಲ್ಲಂತೂ ವಿಚಿತ್ರವಾದ ಮಾತಾಗಿದೆ. ಪರಮಪಿತ ಪರಮಾತ್ಮನೇ ಜ್ಞಾನಸಾಗರನಾಗಿದ್ದಾರೆ ಅವರೇ ಸರ್ವಶಕ್ತಿವಂತನಾಗಿದ್ದಾರೆ. ಎಲ್ಲಾ ವೇದಗಳು ಶಾಸ್ತ್ರಗಳು ಗ್ರಂಥ ಇತ್ಯಾದಿಗಳು ಅವರಿಗೆ ಗೊತ್ತಿದೆ. ಅವರು ನಿರಾಕಾರ ಜ್ಞಾನಸಾಗರ ಆನಂದಸಾಗರ, ದಯಾಸಾಗರನಾಗಿದ್ದಾರೆ. ಎಲ್ಲರ ಮೇಲೆ ದಯೆ ತೋರಿಸುತ್ತಾರೆ. ಇಡೀ ಸೃಷ್ಟಿಯ ಮೇಲೆ ದಯೆ ತೋರಿಸುತ್ತಾರೆ ಏಕೆಂದರೆ ಇಡೀ ಸೃಷ್ಟಿಯು ತಮೋಪ್ರಧಾನವಾಗಿದೆ. ಪಂಚತತ್ವಗಳೂ ಸಹ ತಮೋಪ್ರಧಾನವಾಗಿಬಿಟ್ಟಿವೆ. ಈ ತತ್ವಗಳ ಮೇಲೂ ಸಹ ದಯೆ ತೋರಿಸುತ್ತಾರೆ ಆ ಕಾರಣ ಅವೂ ಸಹ ಸತೋಪ್ರಧಾನವಾಗಿಬಿಡುತ್ತವೆ ಆದ್ದರಿಂದ ಅವರನ್ನು ಬೇಹದ್ದಿನ ಸರ್ವೋದಯ ಎಂದು ಕರೆಯಲಾಗುತ್ತದೆ. ಇದೂ ಸಹ ನಾಟಕದಲ್ಲಿ ನಿಗಧಿಯಾಗಿದೆ. ಆತ್ಮ ಪವಿತ್ರವಾಗುವುದರಿಂದ ಪ್ರತಿಯೊಂದು ವಸ್ತುವೂ ಪವಿತ್ರವಾಗಿಬಿಡುತ್ತದೆ. ಈಗ ಈ ತತ್ವ ಇತ್ಯಾದಿಗಳೂ ಸಹ ಎಷ್ಟು ನಷ್ಟಗೊಳಿಸುತ್ತವೆ. ಸತ್ಯಯುಗದಲ್ಲಿ ತತ್ವಗಳೂ ಸಹ ಸತೋಪ್ರಧಾನವಾಗಿರುತ್ತವೆ, ಎಂದೂ ಯಾರೂ ವೃದ್ಧರಾಗುವುದಿಲ್ಲ ಆದ್ದರಿಂದ ಹಾಳಾಗಿರುವವರನ್ನು ಸುಧಾರಿಸುವವರು ತಂದೆಯಾಗಿದ್ದಾರೆ. ಅವರನ್ನೇ ವಿಶ್ವದ ಸರ್ವಶಕ್ತಿವಂತನೆಂದು ಹೇಳಲಾಗುತ್ತದೆ. ಅವರೇ ವಿಶ್ವದ ಸರ್ವಶಕ್ತಿವಂತ ರಾಜ್ಯವನ್ನು ಸ್ಥಾಪನೆ ಮಾಡುತ್ತಾರೆ. ತಾವಂತೂ ನಿರಾಕಾರನಾಗಿದ್ದಾರೆ, ಅವರನ್ನು ಮಹಾರಾಜ ಅಥವಾ ವಿಶ್ವದ ಮಾಲೀಕ, ವಿಶ್ವದ ಮೇಲೆ ರಾಜ್ಯ ಮಾಡುವವರೆಂದು ಹೇಳುವುದಿಲ್ಲ. ಅವರು ರಾಜ್ಯಭಾರ ಮಾಡುವುದಿಲ್ಲ.

ನಾವು ಏಕಚಕ್ರಾಧಿಪತ್ಯ ವಿಶ್ವದ ಮಾಲಿಕರಾಗುತ್ತೇವೆ ಎಂದು ನೀವು ಮಕ್ಕಳು ಹೇಳುತ್ತೀರಿ. ಮತ್ತೆ ನಿಮ್ಮ ಮೇಲೆ ಯಾರ ಅಧಿಕಾರವೂ ನಡೆಯುವುದಿಲ್ಲ. ಯಾರೂ ಆಜ್ಞೆಯನ್ನು ಮಾಡಲು ಸಾಧ್ಯವಿಲ್ಲ. ಸತ್ಯಯುಗ-ತ್ರೇತಾಯುಗದಲ್ಲಿ ಮತ್ಯಾರೂ ಇರುವುದಿಲ್ಲ ಅಂದಾಗ ನೀವು ಮಕ್ಕಳು ಸಿದ್ಧ ಮಾಡಿ ತಿಳಿಸಬೇಕು - ಸರ್ವಶಾಸ್ತ್ರ ಶಿರೋಮಣಿ ಗೀತೆಯಾಗಿದೆ, ಭಗವಂತನೇ ರಾಜಯೋಗವನ್ನು ಕಲಿಸಿದ್ದಾರೆ. ನೀವು ಮಕ್ಕಳು ತಿಳಿದಿದ್ದೀರಿ ನಾವು ಮನುಷ್ಯರಿಂದ ದೇವತೆಗಳಾಗುತ್ತೇವೆಂದು. ಮನುಷ್ಯರು ಕೆಟ್ಟುಹೋಗಿದ್ದಾರೆ ಆದ್ದರಿಂದಲೇ ತಂದೆಯು ಬಂದು ದೇವತೆಗಳನ್ನಾಗಿ ಮಾಡುತ್ತಾರೆ. ಎಲ್ಲದರ ಆಧಾರವು ಪವಿತ್ರತೆಯ ಮೇಲಿದೆ. ಬಾಬಾ, ನಾವು ಪವಿತ್ರರಾಗಲು ಬಹಳ ಕಷ್ಟವನ್ನು ಕೊಡುತ್ತಾರೆ ಎಂದು ಮಕ್ಕಳು ಬರೆಯುತ್ತಾರೆ. ಮಕ್ಕಳಿಗೆ ತಿಳವಳಿಕೆ ನೀಡಲಾಗಿದೆ ಬಹಳ ಯುಕ್ತಿಯಿಂದ ನಡೆಯಬೇಕಾಗಿದೆ. ಇದರಲ್ಲಿ ಬಹಳ ಬುದ್ಧಿವಂತಿಕೆ ತೋರಬೇಕಾಗಿದೆ. ಒಂದು ಆಟವಿದೆ, ಅದರಲ್ಲಿ ತೋರಿಸಿದ್ದಾರೆ ಒಬ್ಬ ಸ್ತ್ರೀ ತನ್ನನ್ನು ಪಾರು ಮಾಡಿಕೊಳ್ಳಲು ಎಷ್ಟೊಂದು ನಾಟಕ ಮಾಡುತ್ತಾಳೆ. ತಂದೆಯು ಹೇಳುತ್ತಾರೆ - ಮಕ್ಕಳೇ, ಇದರಲ್ಲಿ ನಷ್ಟಮೋಹಿಗಳಾಗಬೇಕಾಗುತ್ತದೆ. ಅನೇಕರಿಗೆ ಪತಿಯ ಮೇಲೆ, ಮಕ್ಕಳ ಮೇಲೆ ಬಹಳ ಮೋಹವಿರುತ್ತದೆ. ಕನ್ಯೆಗೆ ಕೇವಲ ತಂದೆ-ತಾಯಿ ಮತ್ತು ಸಹೋದರ-ಸಹೋದರಿಯ ಮೇಲೆ ಮೋಹವಿರುತ್ತದೆ ನಂತರ ಯಾವಾಗ ಮದುವೆ ಮಾಡಿಕೊಳ್ಳುತ್ತಾರೆ ಆಗ ಮೋಹವು ಅನೇಕರಲ್ಲಿ ಹೆಚ್ಚುತ್ತಾ ಹೋಗುತ್ತದೆ. ಪತಿ, ಅತ್ತೆ ನಂತರ ಮಕ್ಕಳಿಗೆ ಜನ್ಮ ನೀಡಿದರೆ ಅವರ ಮೇಲೆ ಎಷ್ಟೊಂದು ಮೋಹವು ಬೆಳೆಯುತ್ತದೆ. ಡಬಲ್ ವೃದ್ಧಿ ಆಗಿಬಿಡುತ್ತದೆ, ಆದ್ದರಿಂದ ಮೊದಲು ನಷ್ಟಮೋಹಿಗಳಾಗಬೇಕು, ನಂತರ ಪರೀಕ್ಷೆಗಳು ಬರುತ್ತದೆ. ಹೇಗೆ ರಾಜರು ಮನೆ-ಮಠವನ್ನು ಬಿಟ್ಟು ಹೋಗುತ್ತಾರೆಂದರೆ ಮೊದಲು ಗುರುಗಳ ಬಳಿ ಹೋಗುತ್ತಾರೆ, ಅಲ್ಲಿ ರಾಜರಿಂದ ಸೌದೆಯನ್ನು ಕತ್ತರಿಸುವುದು, ಆಶ್ರಮವನ್ನು ಸ್ವಚ್ಛ ಮಾಡುವುದು ಮುಂತಾದವುಗಳನ್ನು ಮಾಡಿಸುತ್ತಾರೆ ಏಕೆಂದರೆ ದೇಹಾಭಿಮಾನವು ಹೋಗಲಿ ಎಂದು. ಇಲ್ಲಿಯೂ ಸಹ ಇಂತಹ ನಿಯಮಗಳಿದೆ. ಬಡವರಂತೂ ಈ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿರುತ್ತಾರೆ. ಆದರೆ ಸಾಹುಕಾರ ಮನೆಯವರಲ್ಲಿ ಬಹಳ ದೇಹಾಭಿಮಾನವಿರುತ್ತದೆ. ಆದ್ದರಿಂದ ಅವರ ಪರೀಕ್ಷೆ ತೆಗೆದುಕೊಳ್ಳಲಾಗುತ್ತದೆ. ಪ್ರಾರಂಭದಲ್ಲಿ ಬಾಬಾರವರೂ ಸಹ ಪರೀಕ್ಷೆಗಳನ್ನು ತೆಗೆದುಕೊಂಡರು ಅಲ್ಲವೆ. ದೇಹಾಭಿಮಾನವನ್ನು ಬಿಡಲು ಎಲ್ಲವನ್ನೂ ಮಾಡುತ್ತಿದ್ದರು. ವಾಹನವನ್ನು ಸ್ವಚ್ಛ ಮಾಡುವುದು ಬಟ್ಟೆ ಒಗೆಯುವುದು ಎಲ್ಲವನ್ನು ಮಾಡುತ್ತಿದ್ದರು. ಯಾರೇ ಬಂದರೂ ತಿಳಿಸಿ - ಮೊದಲು ಈ ಕೆಲಸವನ್ನು ಮಡಬೇಕಾಗುತ್ತದೆ, ಶ್ರೀಮಂತ ಮನೆಯವರಿಗಂತೂ ಬಹಳ ಪರಿಶ್ರಮವಿದೆ. ಬಡವರಂತೂ ಏಟನ್ನು ತಿನ್ನಬೇಕಾಗುತ್ತದೆ. ಪವಿತ್ರರಾಗಲು ಬಿಡುವುದಿಲ್ಲ. ಅವರ ಜೊತೆ ಯುಕ್ತಿಯಿಂದ ನಡೆಯಬೇಕಾಗುತ್ತದೆ. ಆದರೆ ಪೂರ್ತಿ ನಷ್ಟಮೋಹಿಗಳಾಗಬೇಕು. ಮೋಹವು ಅರ್ಧ ನಷ್ಟವಾದರೆ ಒಂದು ಕಾಲು ಅಲ್ಲಿ ಒಂದು ಕಾಲು ಇಲ್ಲಿ. ಹೀಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ನಂತರ ಇಂತಹವರು ಬಹಳ ಸಿಕ್ಕಿಹಾಕಿಕೊಂಡು ಬಹಳ ದುಃಖಿ ಆಗಿಬಿಡುತ್ತಾರೆ. ತಂದೆಯನ್ನು ಮರೆಯುವುದರಿಂದ ಪತಿತರಾಗಿಬಿಡುತ್ತಾರೆ.

ತಂದೆಯು ಮಕ್ಕಳಿಗೆ ನಿರಂತರ ನೆನಪು ಮಾಡಲು ಎಷ್ಟೊಂದು ಯುಕ್ತಿಗಳನ್ನು ತಿಳಿಸುತ್ತಾರೆ. ನೆನಪಿನಿಂದಲೇ

ವಿಕರ್ಮಾಜೀತರಾಗುತ್ತೀರಿ. ಕಲ್ಪ-ಕಲ್ಪವು ಶ್ರೀಮತವನ್ನು ಕೊಡುತ್ತಾ ಬಂದಿದ್ದೇನೆ, ರಾಜಧಾನಿಯಂತೂ ಅವಶ್ಯವಾಗಿ ಸ್ಥಾಪನೆ ಆಗುತ್ತದೆ. ಯಾರು ಕಲ್ಪದ ಹಿಂದಿನ ತರಹ ಪುರುಷಾರ್ಥ ಮಾಡುತ್ತಾರೆಯೋ ಅವರನ್ನು ಮುಚ್ಚಿಡಲು ಸಾಧ್ಯವಿಲ್ಲ. ತಕ್ಷಣ ಗೊತ್ತಾಗಿಬಿಡುತ್ತದೆ. ದಾಸ-ದಾಸಿಯರು ಆಗಬೇಕಲ್ಲವೆ? ಇಲ್ಲಿರುತ್ತಾರೆಂದರೆ ರಾಜಧಾನಿಯಲ್ಲಂತೂ ಬಂದುಬಿಡುತ್ತಾರೆ. ಏಕೆಂದರೆ ನನ್ನ ಮಕ್ಕಳಾದರಲ್ಲವೇ. ದಾಸ-ದಾಸಿಯರಾಗಿ ಒಂದಲ್ಲ ಒಂದು ಪದವಿಯನ್ನು ಪಡೆದುಕೊಳ್ಳುತ್ತಾರೆ ಇಲ್ಲವೆಂದರೆ ದಾಸ-ದಾಸಿಯರನ್ನು ಎಲ್ಲಿಂದ ತರುವುದು! ಪ್ರಜೆಗಳಂತೂ ಒಳಗೆ ಬರಲು ಪ್ರವೇಶ ಇರುವುದಿಲ್ಲ. ದಾಸ-ದಾಸಿಯರಂತೂ ಒಳಗೆ ಇರುತ್ತಾರೆ. ಕೆಲವರು ನಾವು ಕೃಷ್ಣನ ದಾಸ-ದಾಸಿಯರಾದರೂ ಒಳ್ಳೆಯದೇ, ತಾಯಿಗಿಂತಲೂ ಹೆಚ್ಚಿನ ಸಮಯ ಅವರ ಮಡಿಲಿನಲ್ಲಿ ಇರುತ್ತೇವೆ ಎಂದು ಹೇಳುತ್ತಾರೆ. ಇತ್ತೀಚೆಗೆ ಮಕ್ಕಳನ್ನು ನರ್ಸ್‌ಗಳೇ ಸಂಭಾಲನೆ ಮಾಡುತ್ತಾರೆ. ಅಲ್ಲಂತೂ ಕೃಷ್ಣನನ್ನು ಸಂಭಾಲನೆ ಮಾಡುವುದರಲ್ಲಿ ಬಹಳ ಖುಷಿ ಇರುತ್ತದೆ. ಕೃಷ್ಣ ಜನ್ಮಾಷ್ಟಮಿಯಂದು ಎಲ್ಲಾ ಮಾತೆಯರು ಕೃಷ್ಣನನ್ನು ಉಯ್ಯಾಲೆಯಲ್ಲಿ ತೂಗುತ್ತಾರೆ ಏಕೆಂದರೆ ಅಲ್ಲಿಯೂ ಸಹ ದಾಸಿಯರು ಸಂಭಾಲನೆ ಮಾಡುತ್ತಾರೆ.

ಬಾಪ್ದಾದಾರವರಿಗೆ ಮಕ್ಕಳು ಬಹಳ ಒಳ್ಳೆಯವರಾಗಬೇಕು. ತಂದೆಯಂತೂ ಹೇಳುತ್ತಾರೆ ರಾಜಧಾನಿಯನ್ನು ಸ್ಥಾಪನೆ ಮಾಡುವುದರಲ್ಲಿ ಎಷ್ಟೊಂದು ಪರಿಶ್ರಮವಾಗುತ್ತದೆ ಏಕೆಂದರೆ ಬೇರೆ-ಬೇರೆ ವೃಕ್ಷಗಳ ಕಟ್ಟಿಗೆಗಳಾಗಿರುವ ಕಾರಣ ಸಂಭಾಲನೆ ಮಾಡುವವರೇ ಬೇಸರವಾಗಿಬಿಡುತ್ತಾರೆ. ನಡೆಯುತ್ತಾ-ನಡೆಯುತ್ತಾ ಕೆಲವರ ಮೇಲೆ ಗ್ರಹಚಾರ ಕುಳಿತುಬಿಡುತ್ತದೆ ಕೇಳಲೇಬೇಡಿ. ಇದಂತೂ ಬೆಲ್ಲಕ್ಕೆ ಗೊತ್ತು ಬೆಲ್ಲದ ಚೀಲಕ್ಕೆ ಗೊತ್ತು ಅಂದರೆ ಬಾಪ್ದಾದಾರವರಿಗೆ ಗೊತ್ತು. ಬೆಲ್ಲವಂತೂ ತಂದೆಯಾಗಿದ್ದಾರೆ, ಮಧುರರಾಗಿದ್ದಾರಲ್ಲವೆ. ಅವರ ಚೀಲ ಯಾರಲ್ಲಿ (ಬ್ರಹ್ಮಾ) ಅವರು ಬರುತ್ತಾರೆಯೋ ಅವರಿಗೇ ಗೊತ್ತು ಮತ್ತು ತಂದೆಗೆ ಗೊತ್ತು ಮಾಯಾ ರಾವಣನು ಈ ರೀತಿ ಏಟನ್ನು ಕೊಡುತ್ತಾನೆ, ಅದು ಯಾರಿಗೂ ಗೊತ್ತಾಗುವುದೇ ಇಲ್ಲ. ಉಲ್ಲಂಘನೆ ಆಗಿಬಿಡುತ್ತದೆ ಎಂದರೆ ತಂದೆಯೊಂದಿಗೆ ಕ್ಷಮೆ ಕೇಳಿ ಇಲ್ಲವೆಂದರೆ ಕರ್ಮಭೋಗವು ಹೆಚ್ಚಾಗಿಬಿಡುತ್ತದೆ. ತಿಳಿಸಿದರೂ ಸಹ ತಿಳಿಯುವುದಿಲ್ಲ. ಹೀಗೆ ಮಾಯೆಯ ಗ್ರಹಣ ಹಿಡಿದುಬಿಡುತ್ತದೆ. ಸ್ವಯಂ ಬ್ರಹ್ಮಾತಂದೆಯವರೇ ತಿಳಿಸುತ್ತಾರೆ - ಕೆಲವೊಮ್ಮೆ ಯೋಗವು ಚೆನ್ನಾಗಿ ಹಿಡಿಯುತ್ತದೆ, ಇನ್ನೂ ಕೆಲವೊಮ್ಮೆ ಮಾಯೆಯು ಇಷ್ಟೊಂದು ಬಿರುಗಾಳಿಯಲ್ಲಿ ತೆಗೆದುಕೊಂಡು ಬರುತ್ತದೆ ಅದರ ಮಾತೇ ಕೇಳಬೇಡಿ. ತಂದೆಯು ತಿಳಿಸುತ್ತಾರೆ - ಮೊದಲು ನೀವು ಅನುಭವ ಮಾಡುತ್ತೀರಿ ಆದ್ದರಿಂದ ಅನ್ಯರಿಗೆ ತಿಳಿಸುತ್ತೀರಲ್ಲವೇ. ಅಂದಾಗ ಎಲ್ಲಾ ಬಿರುಗಾಳಿಗಳು ಮೊದಲು ಬ್ರಹ್ಮಾರವರಲ್ಲಿ ಬರುತ್ತವೆ. ತಂದೆಯು ತಿಳಿಸುತ್ತಾರೆ - ತಾನೇ ಬುದ್ಧಿವಂತನೆಂದು ತಿಳಿಯಬಾರದು. ಸ್ವಚ್ಛ ಹೃದಯವಿದ್ದಾಗ ತಂದೆಯೂ ಸಹ ರಾಜಿ ಆಗುತ್ತಾರೆ. ಒಳಗೂ ಹೊರಗೂ ಹೃದಯ ಸ್ವಚ್ಛವಾಗಿರಲಿ ಆಗಲೇ ಸತ್ಯ ಹೃದಯದ ಮೇಲೆ ಮಾಲಿಕ ತಂದೆಯು ರಾಜಿ ಆಗುತ್ತಾರೆ. ನಾವು ಹಾಳಾಗಿರುವವರನ್ನು ತಂದೆಯು ಸುಧಾರಣೆ ಮಾಡುತ್ತಿದ್ದಾರೆ. ನಾವು ಮಂಗಗಳ ಸಮಾನ ಇದ್ದೆವು ತಂದೆ ಮಂದಿರಕ್ಕೆ ಯೋಗ್ಯರನ್ನಾಗಿ ಮಾಡುತ್ತಾರೆ. ವಿಶ್ವಕ್ಕೆ ನಾವು ಮಾಲೀಕರಾಗುತ್ತೇವೆ ನಂತರ ಮಂದಿರದಲ್ಲಿ ಕುಳಿತುಕೊಳ್ಳಲು ಒಂದು ಕುಟೀರವು ಸಿಗುತ್ತದೆ. ಸತ್ಯಯುಗವನ್ನು ಶಿವಾಲಯವೆಂದು ಕರೆಯಲಾಗುತ್ತದೆ ಎಂದು ನಿಮಗೆ ಗೊತ್ತಿದೆ. ಇಡೀ ವಿಶ್ವದಲ್ಲಿ ರಾಜ್ಯ ಮಾಡುತ್ತೀರಿ ನಂತರ ನಿಮಗಾಗಿ ಮಂದಿರಗಳಾಗುತ್ತವೆ. ಅದರಲ್ಲಿ ನಿಮ್ಮ ಪೂಜೆ ಆಗುತ್ತದೆ. ಪೂಜೆ ಮಾಡುವವರೂ ಸಹ ನೀವೇ ಆಗಿದ್ದೀರಿ. ನೀವೇ ಪೂಜ್ಯರಾಗಿದ್ದಿರಿ ನಂತರ ಪೂಜಾರಿಗಳಾಗಿದ್ದೀರಿ ಮತ್ತೆ ಪೂಜ್ಯರಾಗುತ್ತೀರಿ. ಬಹಳ ಚೆನ್ನಾಗಿ ತಿಳಿಸಲಾಗುತ್ತದೆ ಆದರೆ ಮಾಯೆಯು ಒಳ್ಳೊಳ್ಳೆಯ ಮಕ್ಕಳ ತಲೆಯನ್ನು ಕೆಡಿಸಿಬಿಡುತ್ತದೆ. ದೇಹಾಭಿಮಾನವು ಬಹಳ ನಷ್ಟ ಮಾಡಿಬಿಡುತ್ತದೆ. ನಂತರ ಒಂದಲ್ಲ ಒಂದು ಪಾಪವಾಗಿಬಿಡುತ್ತದೆ. ಶಿವತಂದೆಯ ಉಲ್ಲಂಘನೆ ಮಾಡಬಾರದು. ಅವರೊಂದಿಗೆ ಯಾರೂ ಮುಚ್ಚಿಡಬಾರದು ಏಕೆಂದರೆ ಧರ್ಮರಾಜನೂ ಇದ್ದಾರೆ. ಅವರೂ ಶಿಕ್ಷೆಯನ್ನು ಕೊಡುತ್ತಾರೆ. ಉಲ್ಲಂಘನೆ ಆಗುತ್ತದೆ ಎಂದರೆ ಕ್ಷಮೆ ಕೇಳಬೇಕು. ಬಾಬಾ ಇಂದು ನಮ್ಮಿಂದ ಈ ತಪ್ಪಾಯಿತು. ಶಿವಬಾಬಾ ಕೇರ್/ಆಫ್ ಬ್ರಹ್ಮಾ ಎಂದರೆ ಬ್ರಹ್ಮಾರವರ ಮೂಲಕ ತಿಳಿಸಬೇಕು. ಬ್ರಹ್ಮಾರವರು ಮೊದಲು ಓದುತ್ತಾರೆಂದು ಭಯವಿರುತ್ತದೆ, ಅರೇ ಅವರಂತೂ ಬಾಬಾ ಆಗಿದ್ದಾರೆ, ಶಿಕ್ಷಣ ನೀಡುತ್ತಾರೆ, ಮಮ್ಮಾರವರೂ ಸಹ ಶಿಕ್ಷಣ ನೀಡುತ್ತಾರೆ. ನಿಮಗೂ ಸಹ ಯಾರಾದರೂ ತಿಳಿಸುತ್ತಾರೆ ನೀವು ಮತ್ತೆ ಶಿವತಂದೆಗೆ ಸಮಾಚಾರವನ್ನು ತಿಳಿಸುತ್ತೀರಿ. ಮಮ್ಮಾ-ಬಾಬಾರವರಿಗೆ ಗೊತ್ತಾಗಿಬಿಡುತ್ತದೆ. ಬಹಳಷ್ಟು ತಿಳಿಸಲಾಗುತ್ತದೆ ಎಂದಮೇಲೆ ಅಹಂಕಾರಿ ಆಗಬಾರದು. ಆನೆಗೆ ಬಹಳ ದೇಹಾಭಿಮಾನವಿರುತ್ತದೆ, ದೇಹಾಭಿಮಾನವೂ ಸಹ ಬಹಳ ನಷ್ಟದಾಯಕವಾಗಿದೆ. ಅರ್ಧಕಲ್ಪ ನಡೆಯಿತಲ್ಲವೆ. ಸತ್ಯಯುಗದಲ್ಲಂತೂ ನಾವಾತ್ಮಗಳು ಇದ್ದೇವೆ, ಈ ಹಳೆಯ ಶರೀರವನ್ನು ಬಿಟ್ಟು ಹೊಸದನ್ನು ತೆಗೆದುಕೊಳ್ಳುತ್ತೇವೆ ಎಂದು ತಿಳಿಯುತ್ತಾರೆ. ಅಲ್ಲಿ ಆತ್ಮಾಭಿಮಾನಿಗಳು ಎಂದು ಹೇಳುತ್ತಾರೆ. ಇಲ್ಲಂತೂ ಎಲ್ಲರೂ ದೇಹಾಭಿಮಾನಿಗಳಾಗಿದ್ದಾರೆ. ಆದ್ದರಿಂದ ಮಕ್ಕಳು ಶ್ರೀಮತವನ್ನು ತೆಗೆದುಕೊಳ್ಳುತ್ತಾ ಇರಬೇಕು. ತಪ್ಪನ್ನೆಂದೂ ಮುಚ್ಚಿಡಬಾರದು. ಮುಚ್ಚಿಡುತ್ತಾ-ಮುಚ್ಚಿಡುತ್ತಾ ಮುಚ್ಚಿ ಹೋಗುತ್ತಾರೆ. ಯೋಗವು ತುಂಡಾಗುತ್ತದೆ. ಹಾಳಾಗಿರುವವರನ್ನು ಸರಿಪಡಿಸುವವರು ಒಬ್ಬರೇ ಭಗವಂತನಾಗಿದ್ದಾರೆ. ಈಗ ನೀವು ಅವರ ಮಕ್ಕಳಾಗಿದ್ದೀರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಹೃದಯದ ಒಳಗೆ ಮತ್ತು ಹೊರಗಿನ ಸ್ವಚ್ಛತೆಯಿಂದ ಮಾಲೀಕ ತಂದೆಯನ್ನು ಖುಷಿ ಪಡಿಸಬೇಕಾಗುತ್ತದೆ. ಮಾಯೆಯ ಗ್ರಹಣದಿಂದ ಪಾರಾಗಲು ತಂದೆಗೆ ಸತ್ಯತೆಯಿಂದ ಎಲ್ಲವನ್ನೂ ತಿಳಿಸಬೇಕಾಗಿದೆ.

2. ಪೂರ್ಣ ನಷ್ಟಮೋಹಿಗಳಾಗಬೇಕಾಗಿದೆ. ಸ್ವಲ್ಪವೂ ಸಹ ಯಾವುದೇ ದೇಹಧಾರಿಗಳ ಮೇಲೆ ಸೆಳೆತವನ್ನು ಇಟ್ಟುಕೊಳ್ಳಬಾರದು. ದೇಹಾಭಿಮಾನವನ್ನು ಬಿಡುವ ಪೂರ್ಣರೀತಿಯಲ್ಲಿ ಪುರುಷಾರ್ಥ ಮಾಡಬೇಕಾಗಿದೆ.

ವರದಾನ: ಸ್ನೇಹದ ಜಾದೂವಿನ ಮುಖಾಂತರ ನಿಬರ್ಂಧನರನ್ನೂ ಸಹ ಬಂಧನದಲ್ಲಿ ಬಂಧಿಸಿರುವಂತಹ ಶ್ರೇಷ್ಠ ಜಾದೂಗಾರ್ ಭವ.

ತಂದೆಗಿಂತಲೂ ದೊಡ್ಡ ಜಾದೂಗಾರ್ ನೀವು ಮಕ್ಕಳಾಗಿರುವಿರಿ. ಇಂತಹ ಸ್ನೇಹದ ಜಾದೂ ನಿಮ್ಮ ಬಳಿ ಇದೆ, ಯಾವುದರಿಂದ ನಿಬರ್ಂಧನರನ್ನೂ ಸಹ ಬಂಧನದಲ್ಲಿ ಬಂಧಿಸಿ ಬಿಡುವಿರಿ. ತಂದೆಗೂ ಸಹ ಮಕ್ಕಳಿಲ್ಲದೆ ಏನೂ ಹೊಳೆಯುವುದಿಲ್ಲ. ನಿರಂತರ ಮಕ್ಕಳನ್ನೇ ನೆನಪು ಮಾಡುತ್ತಿರುತ್ತಾರೆ. ಎಷ್ಟು ಬಾರಿ ತಂದೆಯನ್ನು ಭೋಜನದ ಸಮಯದಲ್ಲಿ ಕರೆಯುವಿರಿ, ತಿನ್ನುವಿರಿ, ನಡೆಯುವಿರಿ, ನಿದ್ರೆ ಮಾಡುವಾಗಲೂ ಸಹ ತಂದೆ ಜೊತೆ ಇರುತ್ತಾರೆ. ಯಾವುದಾದರೂ ಕರ್ಮ ಮಾಡಬೇಕಾದಲ್ಲಿ ಹೇಳುವಿರಿ ಕೆಲಸ ನಿಮ್ಮದು, ನೀವು ಮಾಡಿ ನಾವು ಕೇವಲ ನಿಮಿತ್ತರಾಗಿ ಕೈ ಆಡಿಸುತ್ತೇವೆ. ನಂತರ ಕರ್ಮದ ಹೊರೆಯೂ ಸಹ ತಂದೆಗೆ ಕೊಟ್ಟು ಬಿಟ್ಟಾಗ ಶ್ರೇಷ್ಠ ಜಾದೂಗಾರರಾದಿರಲ್ಲವೇ?

ಸ್ಲೋಗನ್: ತಮ್ಮ ಸ್ವ-ಸ್ಥಿತಿಯ ಶಕ್ತಿಯಿಂದ ಪರಿಸ್ಥಿತಿಯನ್ನು ಬದಲಾಯಿಸುವಂತಹವರು ಎಂದೂ ಬೇಸರ ಆಗಲು ಸಾಧ್ಯವಿಲ್ಲ.